ಸರಬರಾಜು ಕಂಪನಿಯ ಜಾಗೃತ ದಳವು ಕಾರ್ಯಾಚರಣೆ ನಡೆಸುತ್ತಿದೆ. ಇದರೊಂದಿಗೆ ಮಾಪಕ ಪರೀಕ್ಷಾ ವಿಭಾಗದವರೂ ಸಹ ತಪಾಸಣೆ ನಡೆಸುತ್ತಿದ್ದಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (323)325
ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ.(ಕುಣಿಗಲ್)
ಉತ್ತರಿಸುವ ಸಚಿವರ ಹೆಸರು : (ಶ್ರೀ ಕೆ.ಎಸ್.ಈಶ್ವರಪ್ಪ)
: ಇಂಧನ ಸಚಿವರು

****

ಅ) ಕುಣಿಗಲ್ ಪಟ್ಟಣದಲ್ಲಿ ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್‌ಗಳು ಮತ್ತು ವಿದ್ಯುತ್ ವೈರುಗಳು ಅತೀ ಹಳೆಯದಾಗಿರುವುದರಿಂದ ಮುಂದೆ ವಿದ್ಯುತ್ ಅಪಘಾತಗಳು ಸಂಭವಿಸುವ ಸಾಧ್ಯತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹಳೆಯ ಉಪಕರಣಗಳನ್ನು ಬದಲಾಯಿಸಲು ಸರ್ಕಾರ ಕೂಡಲೇ ಕ್ರಮ ಕೈಕೊಳ್ಳುವುದೇ?

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಕುಣಿಗಲ್ ಪಟ್ಟಣದಲ್ಲಿ ಅತೀ ಹಳೆಯದಾಗಿರುವ / ಶಿಥಿಲಗೊಂಡಿರುವ ವಿದ್ಯುತ್ ಕಂಬಗಳು ಮತ್ತು ವಿದ್ಯುತ್ ತಂತಿ ಮಾರ್ಗಗಳನ್ನು ಗುರುತಿಸಿ ಬದಲಾಯಿಸುವ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

ಕಳೆದ ಮೂರು ವರ್ಷಗಳಲ್ಲಿ, ಕುಣಿಗಲ್ ಪಟ್ಟಣದಲ್ಲಿ 63 ವಿದ್ಯುತ್ ಕಂಬಗಳನ್ನು ಬದಲಾಯಿಸಿರುವುದಲ್ಲದೆ 54 ಮಧ್ಯಂತರ ವಿದ್ಯುತ್ ಕಂಬಗಳನ್ನು ಸ್ಥಾಪಿಸಲಾಗಿದೆ. 15 ಕಿ.ಮೀ. ಉದ್ದದ ತಂತಿ ಮಾರ್ಗಗಳನ್ನು ಬದಲಾಯಿಸಲಾಗಿದೆ. ಸಂದರ್ಭಕ್ಕೆ/ಅಗತ್ಯತೆಗೆ ತಕ್ಕಂತೆ ಪರಿಸ್ಥಿತಿಯನ್ನು ಅವಲೋಕಿಸಿ, ಇರುವ ಹಳೆಯ / ಶಿಥಿಲಗೊಂಡಿರುವ ವಿದ್ಯುತ್ ಕಂಬಗಳನ್ನು ಮತ್ತು ವಿದ್ಯುತ್ ವಾಹಕಗಳನ್ನು ಹಂತ ಹಂತವಾಗಿ ಬದಲಾಯಿಸುವ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (324)326
ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್)
ಉತ್ತರಿಸುವ ಸಚಿವರು : (ಶ್ರೀ.ವಿಶ್ವೇಶ್ವರ ಹೆಗಡೆ ಕಾಗೇರಿ)
: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ ಶಿಕ್ಷಕರ ಮತ್ತು ಸಿಬ್ಬಂದಿಗಳ ಕೊರತೆ ಹಾಗೂ ಮೂಲಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರಿನ ಅಭಾವ, ಕಾಂಪೌಂಡ್ ನಿರ್ಮಾಣ, ಪಿಠೋಪಕರಣಗಳು, ಸಮವಸ್ತ್ರ ಮತ್ತು ಪಠ್ಯಪುಸ್ತಕಗಳ ಪೂರೈಕೆ ಈ ವಿಷಯಗಳ

ಸಂಬಂಧ ಕುಣಿಗಲ್ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು 2008–09ನೇ ಸಾಲಿಗಾಗಿ ಸಲ್ಲಿಸಿರುವ ಪ್ರಸ್ತಾವನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ ಹಾಗಿದ್ದಲ್ಲಿ, ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮಗಳಾವುವು?

- ಪ್ರಾಥಮಿಕ ಶಾಲಾ ಶಿಕ್ಷಕರು: ಕುಣಿಗಲ್ ತಾಲ್ಲೂಕಿನಲ್ಲಿ ಈಗಾಗಲೇ 111(34 ಖಾಲಿ ಹುದ್ದೆಗಳು + 77 ಶಿಕ್ಷಕರ ಸಹಿತ) ಹುದ್ದೆಗಳನ್ನು ಹೆಚ್ಚುವರಿ ಗುರ್ತಿಸಿದ್ದು ಶಿಕ್ಷಕರ ಕೊರತೆ ಇರುವುದಿಲ್ಲ,
- ಪ್ರೌಢಶಾಲಾ ಶಿಕ್ಷಕರು : ಕುಣಿಗಲ್ ತಾಲ್ಲೂಕಿನಲ್ಲಿ ಒಟ್ಟು 23 ಪ್ರೌಢಶಾಲಾ ಶಿಕ್ಷಕರ ಕೊರತೆ ಇದೆ. ಶಿಕ್ಷಕರ ಕೊರತೆಯಿರುವ ಶಾಲೆಗಳಿಗೆ ಪಕ್ಕದ ಶಾಲೆಗಳಿಂದ ಪ್ರೌಢಶಾಲಾ ಸಹ ಶಿಕ್ಷಕರನ್ನು ಮತ್ತು ಪದವಿ ಹಾಗೂ ಬಿ.ಇಡಿ ತರಬೇತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಬಿ.ಇ.ಓ.ರವರ ಹಂತದಲ್ಲಿ ನಿಯೋಜನೆ ಮಾಡಲಾಗಿದೆ.
- ಸಿಬ್ಬಂದಿಗಳು: ಬೋಧಕೇತರ ಹುದ್ದೆಗಳ ಕೊರತೆಗೆ ಸಂಬಂಧಿಸಿದಂತೆ ಪ್ರಥಮ ದರ್ಜೆ ಸಹಾಯಕರ ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗ ಹಾಗೂ ಅನುಕಂಪದ ಆಧಾರದ ಮೇಲೆ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗಿದೆ.
- ಡಿ ದರ್ಜೆ ಖಾಲಿ ಹುದ್ದೆಗಳಿಗೆ ಅನುಕಂಪದ ಆಧಾರದ ಮೇಲಿನ ಅಭ್ಯರ್ಥಿಗಳನ್ನು ಸಹ ನೇಮಕ ಮಾಡಲಾಗುತ್ತಿದೆ. ಮುಂದುವರೆದು ಖಾಲಿ ಇರುವ ಬೆರಳಚ್ಚುಗಾರರ/ವಾಹನಚಾಲಕರ/ಅಟೆಂಡರ್ ಹಾಗೂ ಡಿ ದರ್ಜೆ ನೌಕರರ ಹುದ್ದೆಗಳನ್ನು ಬಾಹ್ಯ ಮೂಲಗಳಿಂದ ಭರ್ತಿ ಮಾಡಲು ಕ್ರಮ ವಹಿಸಲಾಗಿದೆ.
- ಮೂಲಭೂತ ಸೌಲಭ್ಯ: ಶೌಚಾಲಯ, ಕುಡಿಯುವ ನೀರು, ಕಾಂಪೌಂಡ್‌ಗಳ ಅವಶ್ಯಕತೆ ಇರುವ ಶಾಲೆಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಶಾಲೆಗಳ ವಿವರ	ಕುಡಿಯುವ ನೀರು	ಶೌಚಾಲಯ	ಕಾಂಪೌಂಡ್
1	ಕಿ.ಪ್ರಾ.ಶಾಲೆ	164	26	233
2	ಹಿ.ಪ್ರಾ.ಶಾಲೆ	9	4	78
3	ಪ್ರೌಢ ಶಾಲೆ	12	9	23